ಇ) ಸರ್ಕಾರದ ಸೂಚನೆಯಂತೆ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಬಸ್‌ಗಳು ಸರಿಯಾದ ವೇಳೆಗೆ ಸಂಚರಿಸದೇ ಇರುವ ಬಗ್ಗೆ

೧೯೨. ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರು ಘಟಕದಿಂದ ಬಸ್‌ಗಳು ವೇಳೆಗೆ ಸರಿಯಾಗಿ ಸಂಚರಿಸದೆ ಇರುವುದು ಸರ್ಕಾರದ ವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಬಸ್ಸುಗಳು ವೇಳೆಗೆ ಸರಿಯಾಗಿ ಸಂಚರಿಸುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಹೌದು

ಆ) ಬಸ್ಸುಗಳನ್ನು ಕಾಲಕ್ಕೆ ತಕ್ಕಂತೆ ಓಡಿಸಲು ಚಾಲಕರು, ನಿರ್ವಾಹಕರು,ಮತ್ತು ವಾಹನ ಗಳ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಿಕಾರಿಪುರ ಮತ್ತು ಸೊರಬ ತಾಲ್ಲೂಕುಗಳಿಂದ ಕೆ.ಎಸ್ ಆರ್.ಟಿ.ಸಿ. ಬಸ್‌ಗಳನ್ನು ಬೆಂಗಳೂರಿಗೆ ಓಡಿಸುವ ಬಗ್ಗೆ

೧೯೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ಹಾಗೂ ಸೊರಬದಿಂದ ಬೆಂಗಳೂರು ನಗರಕ್ಕೆ ನೇರವಾಗಿ ಬರಲು ಬಸ್ ಸೌಲಭ್ಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಹೌದು

ಆ) ಶಿವಮೊಗ್ಗ ಜಿಲ್ಲೆಯಂ ಸೊರಬ ಹಾಗೂ ಶಿಕಾರಿಪುರದ ಸಾರಿಗೆ ರಾಷ್ಟ್ರೀಕರಣವಲ್ಲದ ವಲಯ ದಲ್ಲಿದ್ದು ಅಲ್ಲಿ ಖಾಸಗಿ ಮಾಲೀಕರ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಲಿದ್ದಾರೆ, ಪ್ರಯಾಣಿಕರ ಅವಶ್ಯಕತೆ ಪೂರೈಸಲು ಬೆಂಗಳೂರಿನಿಂದ ಸಿರ್ಸಿ ಮತ್ತು ಹಿರೇಕೆರೂರಿಗೆ ಸೊರಬ, ಮತ್ತು ಶಿಕಾರಿಪುರ ಮಾರ್ಗವಾಗಿ ಬಸ್ ಸೌಲಭ್ಯವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಲ್ಪಿಸುವುದು ಮುಂದೆ ನೇರ ಪ್ರಯಾಣಿಕರ ಸಂಖ್ಯೆಯನ್ನು ಗಮನಿಸಿ ಸೊರಬದಿಂದ ಶಿಕಾರಿಪುರ ಮಾರ್ಗವಾಗಿ ಬೆಂಗಳೂರಿಗೆ ಪ್ರತ್ಯೇಕ ಸಾರಿಗೆಯನ್ನು ಒದಗಿಸಲಾಗುವುದು.

ಶಿಕಾರಿಪುರ ತಾಲ್ಲೂಕು ಸನ್ಯಾಸಿಕೊಪ್ಪ ಏತ ನೀರಾವರಿ ಬಗ್ಗೆ

೧೯೪. ಶ್ರೀ ಬಿ. ಎಸ್ ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕು ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆಯ ಕಾರ್ಯಾದೇಶವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

ಆ) ಈ ನೀರಾವರಿ ಯೋಜನೆಯನ್ನು ಈವರೆಗೂ ಪ್ರಾರಂಭಿಸದಿರಲು ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಈ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂಮಿಯಲ್ಲಿ ಬರುವುದರಿಂದ ಇದನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯಂ ಪರಿಶೀಲನೆಯಲ್ಲಿರುವುದರಿಂದ, ಇದರ ಇತ್ಯರ್ಥವಾಗಿ ಯೋಜನೆಯು ಸಾಧುವಾಗಿ ಕಂಡುಬಂದಲ್ಲಿ ಸದರೀ ಯೋಜನೆಯನ್ನು ಕೈಗೊಳ್ಳಲಂ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.